**ಸಾಕ್ಷಿಯನ್ನು ದಿಃ 04.07.2022 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಜಿ.ಎಂ.ಜಿ ವಕೀಲರಿಂದಃ-**

10. ಯಾವುದೇ ದೇವರಿಗೆ ಅಲಂಕಾರ ಮಾಡಿದರೂ ಸಹ ಗರ್ಭಗುಡಿಯ ಬಾಗಿಲು ಹಾಕಿ ಅಲಂಕಾರ ಎಲ್ಲಾ ಮುಗಿದ ನಂತರ ಕೊನೆಗೆ ದೇವರಿಗೆ ಕೀರೀಟ ದಾರಣೆ ಮಾಡಿ ಗರ್ಭಗುಡಿಯ ಬಾಗಿಲು ತೆಗೆಯುತ್ತಾರೆ ಎಂದರೆ ಗರ್ಭಗುಡಿಯ ಒಳಗಡೆ ಅಲಂಕಾರ ಮಾಡುವುದು ನನಗೆ ಗೊತ್ತಾಗುವುದಿಲ್ಲ. ನಿಮ್ಮ ಬನಶಂಕರಿ ದೇವಸ್ಥಾನದ ಗರ್ಭಗುಡಿಯ ಒಳಗಡೆಯೂ ಸಹ ಸಿ.ಸಿ ಕ್ಯಾಮೆರಾ ಇದೆ ಎಂದರೆ ಸರಿಯಲ್ಲ.

11. ನೀವು ಹೇಳುವ ಪ್ರಕಾರ ದಿಃ 23-09-2014 ರಲ್ಲಿ ನವರಾತ್ರಿ ಇದ್ದು ಆಭರಣ ಗಳನ್ನು ಸತ್ಯನಾರಾಯಣ ಶ್ಸಾಸ್ತ್ರೀ ರವರು ಪಡೆದಿದ್ದು ನವರಾತ್ರಿ ಮುಗಿದ ನಂತರ ಆಭರಣಗಳನ್ನು ಏಕೆ ವಾಪಸ್ಸು ನೀಡಲಿಲ್ಲ ಎಂದು ನೋಟೀಸನ್ನು ನೀಡಿದೀರಾ ಎಂದರೆ ನಾನು ನೋಟೀಸು ನೀಡಿಲ್ಲ ಯಾಕೆಂದರೆ ದೇವಿಯ ಜನ್ಮೋತ್ಸವ ಎರಡು ತಿಂಗಳ ನಂತರ ಇತ್ತು, ಅದರ ನಂತರ ಜಾತ್ರೆ ಇತ್ತು ಮತ್ತು ಜಾತ್ರೆಯ ನಂತರ ಶತಮಾನೋತ್ಸವ ಇತ್ತು, ಆದ್ದರಿಂದ ಇವೆಲ್ಲವೂಗಳನ್ನು ಮುಗಿದ ನಂತರ ಆಭರಣಗಳನ್ನು ವಾಪಸ್ಸು ಕೊಡುತ್ತೇವೆಂದು ಹೇಳಿದ್ದರು. ನೀವು ಹೇಳುವ ಪ್ರಕಾರ ದಿಃ 25-04-2015 ಕ್ಕೆ ಈ ಎಲ್ಲಾ ಕಾರ್ಯಕ್ರಮಗಳೂ ಮುಗಿದಿದ್ದವೂ ಎಂದರೆ ಹೌದು. ನೀವು ದಿಃ 25-04-2015 ರ ನಂತರ ಸತ್ಯ ನಾರಾಯಣ ಶ್ಸಾಸ್ತ್ರೀ ರವರಿಗೆ ಆಭರಣಗಳನ್ನು ಮರಳಿ ನೀಡಿ ಎಂದು ನೋಟೀಸು ನೀಡಿದೀರಾ ಎಂದರೆ ನಾನು ಲಿಖಿತವಾಗಿ ನೋಟೀಸನ್ನು ನೀಡಿಲ್ಲ ಆದರೆ ನಾನು ಮೌಖಿಕವಾಗಿ ಅವರಿಗೆ ಕೇಳಿದ್ದೆ ಮತ್ತು ನನಗೆ ಅಡಿಷನಲ್ ಚಾರ್ಜ್ ಸಹ ಇತ್ತು. ನೀವು ಮೌಖಿಕವಾಗಿ ಆಭರಣಗಳನ್ನು ಮರಳಿ ನೀಡಿ ಎಂದು ಕೇಳಿದೆ ಎಂದು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವೂ ಹೇಳುವ ಹಾಗೆ ಕಿರೀಟವು ಆರೋಪಿತರ ತಪ್ಪಿನಿಂದ ಮುಕ್ಕು ಆಗಿಲ್ಲ ಎಂದರೆ ಸರಿಯಲ್ಲ. ಕಿರೀಟವೂ



ಶತಮಾನೋತ್ಸವ ಅಥವಾ ಅದಕ್ಕಿಂತ ಮೊದಲು ಯಾವಾಗಲೂ ಮುಕ್ಕಾಗಿದೆ ಅದು

ಆರೋಪಿತರ ತಪ್ಪಿನಿಂದ ಆಗಿಲ್ಲ ಎಂದರೆ ಮುಕ್ಕಾಗಿದ್ದರೆ ಆರೋಪಿತರು ಕಿರೀಟವನ್ನು ಧರಿಸುತ್ತಿರಲಿಲ್ಲ. ನಿಮ್ಮ ಪ್ರಕಾರ ದಿಃ 23-09-2014 ರಿಂದ ದಿಃ 15-06-2015 ರವರಗೆ ಕಿರೀಟವು ಪ್ರದಾನ ಅರ್ಚಕರ ಸುಪರ್ಧಿಯಲ್ಲಿ ಇತ್ತು ಎಂದರೆ ಹೌದು ಸಾಕ್ಷಿಯು ಮುಂದುವರೆದು ಪ್ರದಾ ಅರ್ಚಕರು ಕಿರೀಟವನ್ನು ಜೋಪಾನವಾಗಿ ಇಟ್ಟುಕೊಂಡಿದ್ದರು. ಪ್ರದಾನ ಅರ್ಚಕರ ಮತ್ತು ನಿಮ್ಮ ತಪ್ಪಿನಿಂದ ನೀವು ಹೇಳುವ ಕಿರೀಟವು ಮುಕ್ಕಾಗಿದೆ ಇದರಲ್ಲಿ ಆರೋಪಿತರ ತಪ್ಪು ಯಾವುದು ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಬೆಳಗಿನ ಕಾಲಾವಕಾಶ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮದ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ

**ಸಾಕ್ಷಿಯನ್ನು ದಿಃ 04.07.2022 ರಂದು ಮದ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಜಿ.ಎಂ.ಜಿ ವಕೀಲರಿಂದಃ-**

12. ನೀವು ದಿಃ 17-04-2017 ರಂದು ಪೋಲೀಸರ ಮುಂದೆ " **ಪ್ರಧಾನ ಅರ್ಚಕರಾದ ಶ್ರೀ ಆರ್ ಸತ್ಯನಾರಾಯಣ ಶಾಸ್ತ್ರೀ ಇವರು ನಮ್ಮ ದೇವಸ್ಥಾನದಲ್ಲಿ ಸುಮಾರು 29 ವರ್ಷಗಳಿಂದ ಅರ್ಚಕರಾಗಿ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ಅಂದಿನಿಂದ ಇವರ ಮೇಲೆ ಯಾವುದೇ ರೀತಿಯ ಗುರುತರ ಆಪಾದನೆಗಳು ಕಂಡುಬಂದಿರುವುದಿಲ್ಲ. ಹಾಗೇಯೇ ಸಹಾಯಕ ಅರ್ಚಕರಾದ ಆರ್.ಎನ್. ಸತೀಶ್ ಈತನು ಸಹ 12 ವರ್ಷಗಳಿಂದ ದೇವಸ್ಥಾನದಲ್ಲಿ ಸಹಾಯಕ ಅರ್ಚಕನಾಗಿ ಕೆಲಸ ಮಾಡಿಕೊಂಡು ಬಂದಿರುತ್ತಾರೆ ಅಂದಿನಿಂದ ಇವರ ಮೇಲೆ ಯಾವುದೇ ರೀತಿಯ ಗುರುತರ ಆಪಾದನೆಗಳು ಕಂಡುಬಂದಿರುವುದಿಲ್ಲ,"** ಎಂದು ನೀವೇ ಈ ಇಬ್ಬರು ವ್ಯಕ್ತಿಗಳು ಅಪರಾದ ಮಾಡಿಲ್ಲವೆಂದು ನಿರ್ಧರಿಸಿ ಹೇಳಿಕೆ ಕೊಟ್ಟಿದ್ದು ಎಂದರೆ ನಾನು ಆ ರೀತಿ ನಿರ್ಧರಿಸಿ ಕೊಟ್ಟಿದ್ದಲ್ಲ ಏಕೆಂದರೆ ಚಿನ್ನ ಕಟ್ಟಾದ ದಿನ ಅವರಿಬ್ಬರೂ ಪೂಜೆ ಮಾಡಿರಲಿಲ್ಲ. ಸಾಕ್ಷಿ ಮುಂದುವರೆದು ನಾನು ಹೇಳಿಕೆ ಕೊಟ್ಟಿದ್ದು ನಿಜ.

13. ನೀವು ದಿಃ 08-06-2015 ರಿಂದ 15-06-2015 ರವರೆಗೆ ಯಾರೂ ಯಾರೂ ಯಾವ ದಿನಾಂಕದಂದು ಪೂಜೆ ಮಾಡಿದರೂ ಎಂದು ತೋರಿಸಲೂತನಿಖಾಧಿಕಾರಿ ಮುಂದಾಗಲೀ ಅಥವಾ ನ್ಯಾಯಾಲಯದಲ್ಲಿ ದಾಖಲಾತಿಗಳನ್ನು ಹಾಜರು ಪಡಿಸಿದ್ದೀರ ಎಂದರೆ ಯಾರ ಯಾರ ಸರದಿ ಪೂಜೆ ಮಾಡಲು ಇತ್ತು ಎಂದು ತೋರಿಸಲು ನಾನು ಲೆಟರ್ ಅನ್ನು ಪೊಲೀಸರಿಗೆ ದೂರು ನೀಡುವಾಗ ಕೊಟ್ಟಿದ್ದೇನೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ನೀಡಿ ಇದರಲ್ಲಿ ಯಾವ ದಾಖಲಾತಿಯಲ್ಲಿ ದಿಃ 08-06-2015 ರಿಂದ 15-06-2015 ರವರೆಗೆ ನೀವು ಹೇಳುವ ಹಾಗೆ ಯಾರು ಯಾರು ಕೆಲಸ

ಮಾಡಿದರೂ ಎಂದು ಬರೆದಿದೆ ತೋರಿಸಿರಿ ಎಂದರೆ ಸಾಕ್ಷಿಯು ನಿಪಿ 1 ರ ಪುಟ ಸಂಖ್ಯೆ 4 ಅನ್ನು ತೋರಿಸಿ ಇದರಲ್ಲಿ ಯಾರೂ ಯಾರೂ ಆ ಅವಧಿಯಲ್ಲಿ ಕೆಲಸ ಮಾಡಿದಾರೆ ಎಂದು ಬರೆದಿದೆ ಎಂದು ನುಡಿಯುತ್ತಾರೆ.

14. ನೀವು ತನಿಖಾಧಿಕಾರಿಗಳಿಗಾಗಲೀ ಅಥವಾ ನ್ಯಾಯಾಲಯದಲ್ಲಾಗಲೀ ಬನಶಂಕರಿ ದೇವಸ್ಥಾನದಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ದಾಖಲಾತಿಗಳನ್ನು ನೀಡಿದ್ದೀರಾ ಎಂದರೆ ಅದರ ಅವಶ್ಯಕತೆ ಬರಲಿಲ್ಲ. ನಿಮಗೆ ನ್ಯಾಯಾಲಯವು ದೇವಸ್ಥಾನದಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ಮಾಹಿತಿ ಕೇಳಿದರೆ ಅದರ ದಾಖಲಾತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಇಲ್ಲ.

15. ಶ್ರೀ ಸೋಮಶೇಖರ್ ಶರ್ಮಾ ರವರು ನೀವು ಹೇಳುವ ಹಾಗೆ ಹಾಗಾಗ ಗೈರು ಹಾಜರಾಗುತ್ತಿದ್ದರೂ ಅವರು ಯಾವ ಯಾವ ದಿನಾಂಕದಂದು ಗೈರು ಹಾಜರಾಗಿದ್ದರೂ ಎಂದು ತೋರಿಸಲೂ ತನಿಖಾಧಿಕಾರಿಗಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ದಾಖಲಾತಿ ನೀಡಿದ್ದೀರ ಎಂದರೆ ಅದರ ಅವಶ್ಯಕತೆ ಇರಲಿಲ್ಲ. ನೀವು ಸೋಮಶೇಖರ್ ಶರ್ಮಾ ರವರಿಗೆ ಈ ಘಟನೆ ನಡೆಯುವ ಪೂರ್ವದಲ್ಲಿ ಗೈರು ಹಾಜರಾದ ಬಗ್ಗೆ ಕಾರಣ ಕೇಳಿ ನೋಟೀಸನ್ನು ನೀಡಿದ್ದೀರಾ ಎಂದರೆ ಕೊಟ್ಟಿರಬಹುದು. ನೀವು ದೂರಿನೊಂದಿಗೆ ಆ ನೋಟೀಸಿನ ಪ್ರತಿಯನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ ಎಂದರೆ ಅದರ ಅವಶ್ಯಕತೆ ಬೀಳಲಿಲ್ಲ. ಸೋಮಶೇಖರ್ ಶರ್ಮಾ ರವರು ಗೈರು ಹಾಜರಾಗದೇ ಫ್ರಾಡ್ ಆಗಿ ಕೆಲಸ ಮಾಡಿದ್ದಾರೆ ಎಂದರೆ ಸರಿಯಲ್ಲ.

16. ನೀವು ಹೇಳುವ ಹಾಗೆ ಘಟನೆ ನಡೆದ ತಕ್ಷಣ ದೂರನ್ನು ಕೊಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ನೇರವಾಗಿ ನಮಗೆ ದೂರು ನೀಡಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಮೇಲಾಧಿಕಾರಿಗಳಿಂದ ಪರ್ಮಿಷನ್ ತೆಗೆದುಕೊಂಡು ದೂರನ್ನು ನೀಡಬೇಕಾಗಿರುತ್ತದೆ. ನಿಮ್ಮದೇ ಬೇಜವಾಬ್ದಾರಿ ಇದ್ದುದರಿಂದ ನಿಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ದೂರು ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀನಿ ಎಂದರೆ ಸರಿಯಲ್ಲ. ಸೋಮಶೇಖರ್ ಶರ್ಮಾ

ರವರು ಗೈರು ಹಾಜರಾಗುತ್ತಿದ್ದಾರೆ ಎಂಬ ಉದ್ದೇಶದಿಂದ ಮಾತ್ರ ನೀವು ಅದನ್ನೇ ತಲೆಯಲ್ಲಿ ಇಟ್ಟುಕೊಂಡು ಸೋಮಶೇಖರ್ ಶರ್ಮಾ ರವರ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಹೇಳಿಕೆ ನೀಡಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನೀವೂ ಯಾವುದೇ ಸಿ ಸಿ ಟಿ ವಿ ಪುಟೇಜ್ ನೋಡಿಲ್ಲ ಎಂದರೆ ನೋಡಿದ್ದೇನೆ.

17. ನೀವೂ ಹೇಳುವ ಪ್ರಕಾರ ಘಟನೆಯು ದಿಃ 08-06-2015 ರಿಂದ ದಿಃ 10-06-2015 ರವರೆಗೆ ನಡೆದಿದ್ದು ನಿಮಗೆ ಮಾಹಿತಿಯು ದಿಃ15-06-2015 ಕ್ಕೆ ಗೊತ್ತಾಗಿದ್ದು ನಿಮಗೆ ಮಾಹಿತಿ ಎಷ್ಟು ಗಂಟೆಗೆ ಗೊತ್ತಾಯಿತು ಮತ್ತು ಡಿ ಸಿ ಅವರ ಅನುಮತಿ ಪಡೆಯಲು ಎಷ್ಟು ಗಂಟೆಗೆ ಲೆಟರ್ ಅನ್ನು ಕಳುಹಿಸಿದಿರೀ ಎಂದರೆ ನನಗೆ ಮಾಹಿತಿ ಗೊತ್ತಾದ ತಕ್ಷಣ ಡಿ ಸಿ ಅವರಿಗೆ ಲೆಟರ್ ಬರೆದೆ. ನಾನು ಗಂಟೆಯನ್ನು ನೋಡಿಲ್ಲ. ನೀವು ಹೇಳುವ ಹಾಗೆ ಡಿ. ನಾಗರಾಜ ರಾವ್ ರವರು ಎಷ್ಟು ಗಂಟೆಗೆ ನಿಮಗೆ ಲೆಟರ್ ಅನ್ನು ನೀಡಿದರೂ ಎಂದರೆ ನಾನು ಗಂಟೆಯನ್ನು ನೋಡಿಲ್ಲ. ನೀವು ಹೇಳುವ ಹಾಗೆ ಡಿ ನಾಗರಾಜ್ ರಾವ್ ರವರಿಗೆ ಕಾರಣ ಕೇಳಿ ನೋಟೀಸನ್ನು ಎಷ್ಟು ಗಂಟೆಗೆ ನೀಡಿದಿರಿ ಎಂದರೆ ಅದೇ ದಿನ ನೀಡಿದ್ದೇನೆ ನಾನು ಗಂಟೆಯನ್ನು ನೋಡಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ